ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಸಂಖ್ಯೆ:-ವಿಪತ್ತು ನಿರ್ವಹಣೆ:ಕೋವಿಡ್-19:1/2020-21 ದಿನಾಂಕ:24-03-2020

## :: ಅಧಿಕೃತ ಜ್ಞಾಪನ ಪತ್ರ ::

ವಿಷಯ:- Novel Coronavirus (COVID-19)ನ ವೈರಸ್ ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯದ ನಿಮಿತ್ತ ಸಾರ್ವಜನಿಕ ದಿನ ನಿತ್ಯ ಬಳಕೆ ವಸ್ತುಗಳ ಉಸ್ತುವಾರಿಗಾಗಿ ಅಧಿಕಾರಿಗಳ ತಂಡವನ್ನು ನೇಮಿಸುವ ಕುರಿತು

ಉಲ್ಲೇಖ:- ಸರ್ಕಾರದ ಆದೇಶ ಅನುಬಂಧ ನಂ ಹೆಚ್ ಎಫ್ ಡಬ್ಲ್ಯೂ 54 ಸಿಜಿಎಂ 2020 ದಿನಾಂಕ:23-3-2020.

---

ಕೋವಿಡ್-19 ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯದ ನಿಮಿತ್ತ ಸಾರ್ವಜನಿಕ ದಿನ ನಿತ್ಯದ ಬಳಕೆ ವಸ್ತುಗಳ ಕೊರತೆಯಾಗದಂತೆ ನಿಗಾವಹಿಸಲು ಅಗತ್ಯ ಕಾರ್ಯಗಳನ್ನು ಕೈಗೊಳ್ಳಲು ಈ ಕೆಳಕಂಡ ಅಧಿಕಾರಿಗಳ ತಂಡವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರಚಿಸಿ ಆದೇಶಿಸಿದೆ.

| ಕ್ರ.ಸಂ | ತಂಡದ ಸದಸ್ಯರ ವಿವರ | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಮಧುಸೂದನ್<br>ಉಪ ನಿರ್ದೇಶಕರು, ಆಹಾರ & ನಾಗರೀಕ ಸರಬರಾಜು ಇಲಾಖೆ, ಚಿತ್ರದುರ್ಗ | 9448233477 |
| 2 | ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳು | - |
| 3 | ಶ್ರೀ.ಶ್ರೀನಿವಾಸ್<br>ಉಪ ನಿರ್ದೇಶಕರು, ಎ.ಪಿ.ಎಂ.ಸಿ, ಚಿತ್ರದುರ್ಗ | 9448684666 |
| 4 | ಶ್ರೀ.ಪಾಂಡುರಂಗ, ಡಿಎಸ್ಪಿ, ಚಿತ್ರದುರ್ಗ(ಚಿತ್ರದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕ್ ಗಳಿಗೆ)<br>ಶ್ರೀರಮೇಶ್, ಡಿಎಸ್ಪಿ, ಹಿರಿಯೂರು( ಹಿರಿಯೂರು ಮತ್ತು ಹೊಸದುರ್ಗ ತಾಲ್ಲೂಕ್ ಗಳಿಗೆ)<br>ಶ್ರೀ ರೋಷನ್ ಜಮೀರ್, ಡಿಎಸ್ಪಿ, ಚಳ್ಳಕೆರೆ (ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕ್ ಗಳಿಗೆ) | 9480803120<br>9480803122<br>9480803121 |

ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ದಿನ ನಿತ್ಯದ ವಸ್ತುಗಳ ಕೊರತೆಯಾಗದಂತೆ ನಿಗಾವಹಿಸಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಈ ತಂಡದ ಸದಸ್ಯರನ್ನಾಗಿ ಮಾಡಿಕೊಳ್ಳುವುದು.

ಮೇಲ್ಕಂಡಂತೆ ರಚಿಸಲಾಗಿರುವ ತಂಡವು ಈ ಕೆಳಕಂಡ ಕರ್ತವ್ಯಗಳನ್ನು ಚಾಚೂತಪ್ಪದೇ ಪಾಲಿಸುವುದು.

1. ದಿನ ನಿತ್ಯದ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ದಿನಸಿ ಅಂಗಡಿಗಳು, ಸೂಪರ್ ಮಾರ್ಕೇಟ್ ಗಳು, ಔಷಧಿ ಅಂಗಡಿಗಳು ದಿನದ 24 ಗಂಟೆಗಳು ತೆರೆದು ಸಾರ್ವಜನಿಕ ಸೇವೆ ನೀಡುವುದಿದ್ದಲ್ಲಿ ಅಂತಹವುಗಳಿಗೆ ಅವಕಾಶ ನೀಡುವುದು.
2. ಇಂತಹ ಸ್ಥಳಗಳಲ್ಲಿ ಹೆಚ್ಚು ಹೆಚ್ಚು ಜನಸಂದಣಿಯಾಗದಂತೆ ತೀವ್ರ ನಿಗಾ ವಹಿಸುವ ಕಾರ್ಯವನ್ನು ಮಾಡುವುದು.

3. ತರಕಾರಿ, ಹಣ್ಣು ಇತ್ಯಾದಿಗಳು ತಳ್ಳುವ ಗಾಡಿಯ ಮೂಲಕ ಬೀದಿಯ ಒಂದು ನಿಗಧಿತ ಸ್ಥಳದಲ್ಲಿ ವ್ಯಾಪರ ವಹಿವಾಟು ನಡೆಸಲು ಸ್ಥಳ ನಿಗಧಿಗೊಳಿಸಿ, ಸೂಕ್ತ ವ್ಯವಸ್ಥೆಯನ್ನು ಮಾಡುವುದು.
4. ಬೀದಿಬದಿಯ ತಳ್ಳುವ ಗಾಡಿಗಳ ವ್ಯಾಪಾರ (ಗೋಬಿ, ಪಾನಿಪುರಿ ಇತ್ಯಾದಿ) ಇಲ್ಲದಿರುವುದರಿಂದ ಅಂತಹ ಗಾಡಿಗಳಲ್ಲಿ ತರಕಾರಿ, ಹಣ್ಣು ಇತ್ಯಾದಿಗಳನ್ನು ಮಾರಾಟ ಮಾಡಲು ಬಯಸಿದಲ್ಲಿ ಅವಕಾಶ ನೀಡುವುದು. ಹಾಗೂ ಜನ ಸಂದಣಿಯಾಗದಂತೆ ಕ್ರಮವಹಿಸುವುದು.
5. ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ವೈಯಕ್ತಿಕ ಸಂರಕ್ಷಣಾ ಸಾಧನಗಳನ್ನು ಕಡ್ಡಾಯವಾಗಿ ಹಾಕಿಕೊಳ್ಳುವುದು.
6. ಅವಶ್ಯವೆನಿಸಿದಲ್ಲಿ ಅಗ್ಯತ ಸಿಬ್ಬಂದಿಗಳ ತಂಡಗಳನ್ನು ರಚನೆ ಮಾಡಿಕೊಂಡು ಕಾಲಮಿತಿಯೊಳಗೆ ಕಾರ್ಯವನ್ನು ನಿರ್ವಹಿಸುವುದು.
7. ಕಾರ್ಯಪಾಲನೆಯ ಬಗ್ಗೆ ಕಾಲ ಕಾಲಕ್ಕೆ ಮಾಹಿತಿಯನ್ನು ನೀಡುವುದು.
8. ಜಿಲ್ಲಾಡಳಿತವು ಕಾಲ ಕಾಲಕ್ಕೆ ನೀಡುವ ಸೂಚನೆ, ಮಾರ್ಗದರ್ಶನಗಳನ್ನು ಕಡ್ಡಾಯವಾಗಿ ಪಾಲಿಸುವುದು

ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು:-

1) ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
3) ಅಧಿಕಾರಿಗಳ ತಂಡದ ಸದಸ್ಯರುಗಳಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ.
4) ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ
5) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ
6) ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಗಳು
7) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು.